# ಇಲಿಗಳು ಸಾರ್, ಇಲಿಗಳು!

‘ಅರವತ್ತು ಸಾವಿರ ಇಲಿಗಳಾ...!’ ಎಂದು ಬಾಸ್ ಬೆವತು ಹೋದರು. ‘ಮೂಷಿಕ ನಿರ್ವಹಣಾ ಸಮಿತಿ’ಯ ರಚನೆಗೆ ಒಪ್ಪಿಗೆ ಕೊಟ್ಟೇಬಿಟ್ಟರು. ಆಮೇಲೇನಾಯ್ತು?

■ ಕಿರಣ್ ಕುಮಾರ್ ಕೆ.ಆರ್.

## ಸವಾಲು + ಕುತಂತ್ರ = ಅವಕಾಶ

ಇದೆಲ್ಲ ಶುರುವಾದದ್ದು ‘ಅತ್ಯಂತ ಹಿಂದುಳಿದಿರುವ/ಭಾರೀ ಹಿಂದುಳಿದಿರುವವರ ಕಲ್ಯಾಣ ಇಲಾಖೆ’ಯ ಆ ಸರ್ಕಾರಿ ಕಛೇರಿಯ ಅಸಂಖ್ಯಾತ ಬೀರುಗಳಲ್ಲಿ ಒಂದರಲ್ಲಿ ಇಲಿಯೊಂದು ಕಾಣಿಸಿಕೊಂಡಾಗ. ಅಟೆಂಡರ್ ನಾಗಪ್ಪನೇ ಮೊದಲು ಅದನ್ನು ಕಂಡದ್ದು. ಕಂಡ ಕೂಡಲೇ ಅವನು ಅದನ್ನು ಸಾಯಿಸಲು ಹೊರಟ. ಅಲ್ಲೇ ಫೈಲೊಂದರ ಮೇಲೆ ತಲೆಯಿಟ್ಟು ಮಧ್ಯಾಹ್ನದ ನಿದ್ದೆ ತೆಗೆಯುತ್ತಿದ್ದ ರಾಜೇಶನಿಗೆ ಈ ಗದ್ದಲದಿಂದ ಎಚ್ಚರವಾಯಿತು. ನಿದ್ದೆ ಕೆಡಿಸಿಕೊಂಡ ಬೇಸರದಲ್ಲಿ ಅವನು ನಾಗಪ್ಪನ ಮೇಲೆ ಅರಚಲಿದ್ದವನು ಇಲಿಯನ್ನು ನೋಡಿ ಸುಮ್ಮನಾದ. ಅಷ್ಟರಲ್ಲಿ ಅವನ ಬಾಸು ಅವನನ್ನು ಕರೆದರು.

‘ಆಯ್ತೇನ್ರೀ, ಆ ಫೈಲು ನೋಡಿದ್ದು?’ ಎಂದು ಕೇಳಿದರು ಬಾಸು.

‘ಇಲ್ಲ ಸಾ... ನೋಡ್ತಿದ್ದೆ. ಅಷ್ರಲ್ಲಿ ಅಲ್ಲಿ ಫೈಲ್ಸ್ ಇಟ್ಟಿರೋ ಬೀರು ಒಳಗೆ ಸದ್ದಾಯ್ತು. ನೋಡಿದ್ರೆ ಇಲಿಗಳು ಸಾ... ಅವುಗಳ್ನ ಹಿಡಿಯೋಕೆ ಒದ್ದಾಡ್ತಾ ಇದ್ದೀವಿ ಸಾ...’ ಎಂದ ರಾಜೇಶ.

ಬಾಸ್ ಗೆ ಸಬೂಬು ಹೇಳಿ ಹೊರಗೆ ಬಂದ ರಾಜೇಶನಿಗೆ ಒಮ್ಮೆಗೆ ಒಂದು ಉಪಾಯ ಹೊಳೆಯಿತು. ನಾಗಪ್ಪನನ್ನು ಕರೆದು ಇಲಿಯನ್ನು ಸಾಯಿಸದಿರುವಂತೆ ಹೇಳಿದ. ಅವನ ತಲೆಯಲ್ಲಿ ಚಿಂತನೆಯೊಂದು ಮೊಳಕೆಯೊಡೆದಿತ್ತು. ಪ್ರತಿ ಸವಾಲಿನಲ್ಲೂ ಒಂದು ಅವಕಾಶವಿದೆಯೆಂಬುದು ಅವನಿಗೆ ಯಾವತ್ತೋ ಅರ್ಥವಾಗಿತ್ತು. ಈ ದಿನದ ಸವಾಲಿನಿಂದ ಅವಕಾಶ ಹುಟ್ಟಿಸಬೇಕಿತ್ತು ಅಷ್ಟೇ. ಸವಾಲುಗಳೆಂದರೆ ರಾಜೇಶನಿಗೆ ಮೋಜಿನ ವಿಷಯ.

## ಅವಕಾಶ+ ಕುತಂತ್ರ = ಮತ್ತಷ್ಟು ಅವಕಾಶಗಳು

ಮುಂದಿನ ವಾರದಲ್ಲಿ ರಾಜೇಶ ತನ್ನ ಬಾಸ್‌ಗೆ ಇಲಿಗಳ ಸಮಸ್ಯೆಯನ್ನು ಹೀಗೆ ವರದಿ ಮಾಡಿದ:

★ ಕಛೇರಿಯಲ್ಲಿರುವ ಕಡತಗಳ ಸಂಖ್ಯೆ – ಅಂದಾಜು ಹತ್ತು ಸಾವಿರ.

